# 'ಸುಧಾ' ಜೊತೆಗಿನ ಓದುಗರ ಒಡನಾಟ

### ಬಿಡಲಾರದ ನಂಟು

ನನಗೆ ತಿಳಿವಳಿಕೆ ಬಂದಾಗಿನಿಂದ 'ಸುಧಾ' ವಾರಪತ್ರಿಕೆ ಓದುತ್ತಾ ಬಂದಿದ್ದೇನೆ. ಆ ಅವಿನಾಭಾವ ಸಂಬಂಧಕ್ಕೆ ಮೂವತ್ತು ವರ್ಷ. ಹಲವು ಮಾಹಿತಿಗಳನ್ನು ಹೊತ್ತು ಬರುವ ಮನೆಯ ಅತಿಥಿ 'ಸುಧಾ' ಮನೆಯ ಹಿರಿಯರಿಂದ ಕಿರಿಯರ ತನಕ ಓದುವ ಪತ್ರಿಕೆ. ಅಂದಿನಿಂದ ಇಂದಿನವರೆಗೂ ಅದೇ ಗುಣಮಟ್ಟ. ಇನ್ನೂ ಹೆಚ್ಚು ಹೊಸ ಹೊಸ ಧಾರಾವಾಹಿಗಳು ಬರಲಿ.

—ಮೇಘನಾ ರಘುನಂದನ್, ಹೂವಿನ ಹಡಗಲಿ

### 'ಸುಧಾ'ಳಿಗೆ ಧನ್ಯವಾದ

'ಸುಧಾ'ಳ ಅನುಬಂಧ ಎಂದಿಗೂ ಮುಗಿಯದೇ ಇರುವಂಥದ್ದು. ಇತ್ತೀಚಿನವರೆಗೂ ಬಂದ ಧಾರಾವಾಹಿಗಳನ್ನು ಸಂಗ್ರಹಿಸಿ ಪುಸ್ತಕ ಮಾಡಿ ಜೋಪಾನವಾಗಿಟ್ಟು ಓದುತ್ತಿರುತ್ತೇನೆ. ಅದರಲ್ಲೂ 'ಪದಬಂಧ' ನನ್ನ ಮೆಚ್ಚಿನ ಅಂಕಣ. ಸಾಕಷ್ಟು ಉಪಯುಕ್ತ ಮಾಹಿತಿಗಳಿಂದ ಮೂಡಿಬರುತ್ತಿರುವ 'ಸುಧಾ'ಳಿಗೆ ಧನ್ಯವಾದ.

—ಎಂ.ಟಿ. ರಮಾನಂದ ರೆಡ್ಡಿ, ಚಿತ್ರದುರ್ಗ

### ಬರೆಯಲು ಬಹಳಷ್ಟಿದೆ...

ಗಡಿಯ ಮೇಲಿನ, ತೆಲುಗು ಪ್ರಾಬಲ್ಯ ಇದ್ದ ಪುಟ್ಟ ಹಳ್ಳಿ ರಾಯಲಪಾಡು ಗ್ರಾಮಕ್ಕೆ ಸುಮಾರು 45–50 ವರುಷಗಳ ಹಿಂದೆಯೇ 'ಸುಧಾ' ಬರುತ್ತಿತ್ತು ಎಂದು ನೆನೆದಾಗ ನನ್ನ ಮನಸು ಕೃತಜ್ಞತೆಯಿಂದ ಆರ್ದ್ರಗೊಳ್ಳುತ್ತದೆ.

ಪತ್ರಿಕೆಯು ನಮ್ಮೂರಿನ ಡಿ. ಚೌಡರೆಡ್ಡಿ ಎಂಬುವರ ಮನೆಗೆ ಬರುತ್ತಿತ್ತು. ಆ ಮನೆಯವರು ನಾನು ಹೋಗಿ ಕೇಳಿದಾಗ ತಪ್ಪದೆ ಕೊಡುತ್ತಿದ್ದರು. ಹಾಗೆ ಶುರುವಾದ ಒಡನಾಟ ಈಗಲೂ ಮುಂದುವರೆದಿದೆ. ಓದಿನ ಜೊತೆಗೆ ಬರೆಯಲೂ ಪ್ರೇರಣೆ ನೀಡಿದೆ. 'ಸುಧಾ' ಬಗ್ಗೆ ಬರೆಯಲು ಬಹಳ ಇದೆ. ಸಂತೋಷ, ಕೃತಜ್ಞತೆಯಿಂದ ಮನ ಮೂಕವಾಗಿದೆ. ನಮನಗಳು.

—ರಾಘವೇಂದ್ರ ರಾಯಲಪಾಡು, ಚಿಕ್ಕಬಳ್ಳಾಪುರ

### 'ಸುಧಾ'ಗೆ 60; ಅಳಿಯದ ಸಂಪತ್ತು

ನಮ್ಮದು ಊರಿಂದ ಊರಿಗೆ ವರ್ಗವಾಗುತ್ತಿದ್ದ ಸರ್ಕಾರಿ ನೌಕರರ ಕುಟುಂಬದ ಹಿನ್ನೆಲೆ. ಹೀಗಾಗಿ ಕರ್ನಾಟಕದ ಹಲವಾರು ಜಿಲ್ಲಾ ಕೇಂದ್ರಗಳಲ್ಲಿ ನಮ್ಮ ವಿದ್ಯಾಭ್ಯಾಸ ನಡೆಯಿತು. ಆದರೆ ಯಾವ ಊರಿಗೆ ಹೋದರೂ ಮೊದಲು ನಾನು ಹುಡುಕುತ್ತಿದ್ದುದು ಆ ಊರಿನಲ್ಲಿರುವ ಗ್ರಂಥಾಲಯ. ಅಲ್ಲಿ 'ಸುಧಾ' ನನ್ನ ಪ್ರಥಮ ಆಯ್ಕೆ.

ಚಲನಚಿತ್ರದ ಸುದ್ದಿ/ಚಿತ್ರಗಳನ್ನು ಕತ್ತರಿಸಿ ಪುಸ್ತಕಗಳಲ್ಲಿ ಅಂಟಿಸಿ ಆಲ್ಬಂ ಮಾಡುವುದು ನನ್ನ ಅಚ್ಚುಮೆಚ್ಚಿನ ಹವ್ಯಾಸವಾಗಿತ್ತು. 1969ರ ಯುಗಾದಿ ಸುಧಾ ವಿಶೇಷಾಂಕದಲ್ಲಿ ಪ್ರಕಟವಾಗಿದ್ದ ನಟಸಾರ್ವಭೌಮ ರಾಜ್ ಕುಮಾರ್ ಅವರ ಸಂದರ್ಶನ ನನ್ನ ಮರೆಯದ ನೆನಪುಗಳಲ್ಲೊಂದು. ಹಾಗೆಯೇ, 1993–94ರ ಅವಧಿಯಲ್ಲಿ 'ನನ್ನ ನಾ ಕಂಡಂತೆ' ಅಂಕಣದಲ್ಲಿ ಸತತ ಪ್ರಕಟವಾಗುತ್ತಿದ್ದ ಕಲಾರತ್ನ ಕಲ್ಯಾಣ್ ಕುಮಾರ್, ಕೆ.ಎಸ್. ಅಶ್ವತ್ಥ್‌ರವರ ಜೀವನ ಕಥೆ ನನ್ನ ಸಂಗ್ರಹದಲ್ಲಿ ಇಂದಿಗೂ ಇದೆ. ವೃತ್ತಿರಂಗಭೂಮಿ ಕುರಿತು ಹಂಪೆ ಸೀತಾರಾಮಯ್ಯರವರು ಬರೆಯುತ್ತಿದ್ದ 'ಬಣ್ಣದ ಬದುಕು' ಅಪರೂಪದ ಮಾಹಿತಿಗಳನ್ನು, ಚಿತ್ರಗಳನ್ನು ಒದಗಿಸಿದ ಸಂಗ್ರಹಾರ್ಹ ಸಂಚಿಕೆ. 'ಅಂತ' ಧಾರಾವಾಹಿ ಪ್ರಕಟವಾಗುತ್ತಿದ್ದಾಗ 'ಸುಧಾ' ಸಂಚಿಕೆಗಾಗಿ ನಮ್ಮ ಶಾಲೆಯ ಗ್ರಂಥಾಲಯಕ್ಕೆ ಹೋಗಿ ಗಂಟೆಗಟ್ಟಲೆ ಕುಳಿತುಕೊಳ್ಳುತ್ತಿದ್ದ ದಿನಗಳು ಇಂದಿಗೂ ನೆನಪಿದೆ.

ನಾನು 'ಸುಧಾ' ಲೇಖಕನಾಗಿಯೂ ಹಲವಾರು ಉತ್ತಮ ನೆನಪುಗಳನ್ನು ಹೊಂದಿದ್ದೇನೆ. ಆರು ದಶಕದಿಂದ ನಿತ್ಯ ನೂತನವಾಗಿರುವ 'ಸುಧಾ' ನನ್ನ ಜೀವನದ ಸಂಧ್ಯೆಯಲ್ಲಿಯೂ ಸಂಗಾತಿ.

—ಬಾಣಾವರ ಮಂಜುನಾಥ್, ಬೆಂಗಳೂರು

### ನಲವತ್ತಾಲ್ಕು ವರ್ಷಗಳ ಸಹಯಾತ್ರಿ

ಕಾಲೇಜು ದಿನಗಳಲ್ಲಿ 'ಸುಧಾ' ಪತ್ರಿಕೆಯನ್ನು ಗ್ರಂಥಾಲಯಗಳಲ್ಲಿ ನೋಡುತ್ತಿದ್ದರೂ, ನಿಯಮಿತವಾಗಿ ಓದಲಾರಂಭಿಸಿದ್ದು ಕೆಲಸಕ್ಕೆ ಸೇರಿ, ಪತ್ರಿಕೆ ಕೊಳ್ಳುವಂತಾದ ಮೇಲೆ. ಅಂದಿನಿಂದ ನನ್ನ ಬಾಳಪಯಣದಲ್ಲಿ 'ಸುಧಾ' ಸಹಯಾತ್ರಿಯಾಗಿ ನನ್ನೊಡನಿದ್ದಾಳೆ. ಒಂದು ವಾರ, ಅನಿವಾರ್ಯ ಕಾರಣದಿಂದ ಪತ್ರಿಕೆಯನ್ನು ನೋಡದಿದ್ದರೆ ಏನನ್ನೋ ಕಳೆದುಕೊಂಡ ಭಾವ ಆವರಿಸಿ, ಮನಸ್ಸು ಮುದುಡುವುದುಂಟು.

1981ರ ಅಕ್ಟೋಬರ್ ಸಂಚಿಕೆಯ 'ನಿಮ್ಮ ಪುಟ' ವಿಭಾಗದಲ್ಲಿ ಪ್ರಕಟವಾದ ನನ್ನ ಮೊದಲ ಬರಹದಿಂದ ಆರಂಭಿಸಿ, ಇಂದಿನವರೆಗೆ ಹಲವು ಛಾಯಾಚಿತ್ರಗಳು, ಚಿತ್ರಲೇಖನಗಳು, ಹಾಸ್ಯ ಲೇಖನಗಳು, ಲಲಿತ ಪ್ರಬಂಧಗಳು ಹಾಗೂ ಕಥೆಗಳು ಪ್ರಕಟಗೊಂಡಿವೆ. 'ಸುಧಾ'ಳ ಜೊತೆಜೊತೆಗೆ ನಾನೂ ಸಾಹಿತ್ಯದಲ್ಲಿ ಆಸಕ್ತಿ ತಳೆದು ಬೆಳೆದುಬಂದೆ.

ಧನ್ಯವಾದಗಳು 'ಸುಧಾ'...

— ಕೆ.ಪಿ. ಸತ್ಯನಾರಾಯಣ, ಹಾಸನ

### ಏನೇ ಪುಟ್ಟಿ 'ಸುಧಾ'...

60 ವರ್ಷ ಆಯಿತೇನೇ ನಿಂಗೆ?  
ನಂಬೋಕೇ ಆಗೋಲ್ವೇ...  
ಅಮೃತವಾಹಿನಿಯಾಗಿ ನೀ ನೀಡಿದೆ ಓದುಗರಿಗೆ  
ಸುಧಾಮೃತ, ಹೃನ್ಮನ ಸೆಳೆದೆ..  
ದಿನ, ವಾರ, ಮಾಸಗಳು ಕಳೆದು ನಿನ್ನ  
'ಷಷ್ಟಿಪೂರ್ತಿ' ಸಮಾರಂಭ ಬಂತಲ್ಲ.  
ಈ ವಜ್ರ ಮಹೋತ್ಸವ ನಿನ್ನ ಶತಮಾನೋತ್ಸವ  
ಸಂಭ್ರಮದ ಸಂತಸವನ್ನು ಹೊತ್ತು ತರಲಿ.  
ಸಾಹಿತ್ಯ ಸೇವೆಯ ಗುಡಿಯಲ್ಲಿ ಜ್ಞಾನಜ್ಯೋತಿ  
ಬೆಳಗುವ ಅನಂತಾನಂತ ದೀಪಗಳು  
ನಿರಂತರವಾಗಿ ಓದುಗರ ಹೃದಯದಲ್ಲಿ  
ಬೆಳಗುತಿರಲಿ...

—ಸುಮನಾ, ಬೆಂಗಳೂರು

### 60ರ ಆಕರ್ಷಣೆ

ಷಷ್ಟ್ಯಬ್ದಿ ಆಚರಿಸಿಕೊಳ್ಳುತ್ತಿರುವ 'ಸುಧಾ'ಳ ಪ್ರತೀ ಹೆಜ್ಜೆಯಲ್ಲೂ ಚೆಲುವಿದೆ. ಓದಿಸಿಕೊಳ್ಳುವ ಆಕರ್ಷಣೆ ಇದೆ. ಹಾಗೆಯೇ ಪ್ರತೀ ವಾರವೂ ಕಾಯುವ ನಿರೀಕ್ಷೆ ನಮ್ಮಲ್ಲಿದೆ.

60ನೇ ವರ್ಷದ ಈ ಆಚರಣೆಯಲ್ಲಿ ನನಗೆ ತಕ್ಷಣ ನೆನಪಾಗೋದು, ನಮ್ಮ ತಂದೆ 'ಸುಧಾ' ಮನೆಗೆ ತರುತ್ತಿದ್ದಾಗ ಮನೆಯಲ್ಲಿ ನಡೆಯುತ್ತಿದ್ದ ಜಗಳ. ನಾನು ಮೊದಲು ಓದಬೇಕೆಂಬ ಹಟ. ಈಗಲೂ ಗುರುವಾರ ಬಂದಾಗ ದಿನಪತ್ರಿಕೆ ಬಿಟ್ಟು ಮೊದಲು ನೋಡೋದು 'ಸುಧಾ'ಳನ್ನೇ. ಅರವತ್ತಾದರೂ ಆಕರ್ಷಣೆ ಕಳೆದುಕೊಳ್ಳದ ಚಿರಯೌವನೆ ಈಕೆ.

—ವೆಂಕಟೇಶ್, ದಾವಣಗೆರೆ

### 'ಸುಧಾ' ಎಂಬ ಸಿಹಿ ನೆನಪು

70ರ ದಶಕದಲ್ಲಿ ಪ್ರಕಟವಾಗುತ್ತಿದ್ದ ಧಾರಾವಾಹಿಗಳನ್ನು ಓದಲು 'ಸುಧಾ' ಯಾವಾಗ ಬರುವುದೋ ಎಂದು ಮನೆಯವರೆಲ್ಲ ಕಾಯುತ್ತಾ ಕುಳಿತು ಓದುತ್ತಿದ್ದ ದಿನಗಳಿದ್ದವು. ಪತ್ರಿಕೆ ಯಾರ ಕೈಗೆ ಮೊದಲು ಸಿಗುವುದೋ, ಅವರೇ ಮೊದಲು ಧಾರಾವಾಹಿಗಳನ್ನು ಓದುವುದು, ಉಳಿದವರು ಕೇಳುವುದು ಮತ್ತು ಅದರ ಬಗ್ಗೆ ಚರ್ಚೆ ಮಾಡುವುದು. ಹೀಗೆ ಅಣ್ಣಂದಿರ ಜೊತೆ ಜಗಳವಾಡುತ್ತಾ ಓದುತ್ತಿದ್ದ ನೆನಪು ಮನಸ್ಸಿನಲ್ಲಿ ಇನ್ನೂ ಸಿಹಿಯಾಗಿದೆ. 'ಸುಧಾ' ನಮಗೆಲ್ಲ ಓದುವ ಹವ್ಯಾಸ ಕಲಿಸಿದೆ.

'ಸುಧಾ' ಎಲ್ಲರ ಮನೆ ಮನಗಳಲ್ಲಿ ನಿರಂತರವಾಗಿ ಸ್ಫೂರ್ತಿ ತುಂಬಲಿ.

—ಜಯಲಕ್ಷ್ಮಿ ಉಪಾಧ್ಯಾಯ ಕಂಚಾರ್ತಿ